ಕುಮಾರ ಚಲವಾದಿ, ಹೊಳೆನರಸಿಪುರ

*ಹಾಲು ಮತ್ತು ಆಲ್ಕೋಹಾಲ್ ಇವುಗಳಲ್ಲಿ ಇರುವ ವ್ಯತ್ಯಾಸವೇನು?*



ಹಾಲು ಕುಡಿಯುತ್ತಾ, ಕುಡಿಯುತ್ತಾ, ಮನುಷ್ಯ ತೆವಳುವಿಕೆಯಿಂದ ನಡಿಗೆಯತ್ತ ಸಾಗುತ್ತಾನೆ. ಆಲ್ಕೋಹಾಲ್ ಕುಡಿಯುತ್ತಾ, ಕುಡಿಯುತ್ತಾ, ಮನುಷ್ಯ ನಡಿಗೆಯಿಂದ ತೆವಳುವತ್ತ ಸಾಗುತ್ತಾನೆ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಪ್ರೇಮದ ಸೆಳೆತಕ್ಕೂ, ನೀರಿನ ಸೆಳೆತಕ್ಕೂ ಇರುವ ವ್ಯತ್ಯಾಸವೇನು ಶಿವಾ?*

ಪ್ರೇಮದ ಸೆಳೆತಕ್ಕೆ ಸಿಕ್ಕರೆ ಬಂಧನ, ನೀರಿನ ಸೆಳೆತಕ್ಕೆ ಸಿಕ್ಕರೆ ಮೋಕ್ಷ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಮುತ್ತು ಕೊಡೋಳು ಬಂದಾಗ ತುತ್ತು ಕೊಟ್ಟೋಳನ್ನೇ ಮರೆಯುವರಿಗೆ ಏನನ್ನ ಬೇಕು ಸಾರ್?*

ಏನು ಬೇಕಾದರೂ ಅನ್ನಿ. ಮುತ್ತಿನ ಮತ್ತಿನಲ್ಲಿ ಇರುವವರಿಗೆ ಏನೇನೂ ಕೇಳಿಸುವುದಿಲ್ಲ!

ಎಚ್.ಆರ್. ದೇಸಾಯಿ, ರಾಯಚೂರು

*ಇಂದು ದೇಶದಲ್ಲಿ ಎಲ್ಲಾ ಕಡೆ ರಾವಣನೇ ವಿಜೃಂಭಿಸುತ್ತಿದ್ದಾನೆ. ರಾಮನಿಗೇನಾಗಿದೆ?*

ಆಗಲೂ ರಾವಣ ಹುಟ್ಟಿ ಸುಮಾರು 40 ವರ್ಷಗಳ ನಂತರ ರಾಮ ಹುಟ್ಟಿದ್ದು. ಕಾದು ನೋಡೋಣ ಇರಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಗೌಡರ ಬಗ್ಗೆ ಪಿಎಚ್‌ಡಿ ಮಾಡಬೇಕೆಂದುಕೊಂಡಿದ್ದೇನೆ. ಮಾರ್ಗದರ್ಶನ ನೀಡುವಿರಾ ರಾಮ್‌ಜಿ?*



ಮಾಡಬಹುದಿತ್ತು, ಆದರೆ ಒಂದು ಹೇಳಿದರೆ ಮನಸ್ತಾಪ, ಇನ್ನೊಂದು ಹೇಳಿದರೆ ಆತ್ಮವಂಚನೆ ಆದುದರಿಂದ ಸಾಧ್ಯವಿಲ್ಲ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಇರುವ ಹನ್ನೆರಡೇ ರಾಶಿಗಳಲ್ಲಿ ಲೋಕದ ಕೋಟಿಗಟ್ಟಲೆ ಜನರ ಭವಿಷ್ಯ ಹೇಗೆ ಹೇಳಲಾಗುತ್ತದೆ?*

ತಪ್ಪುತಪ್ಪಾಗಿ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ವಿದ್ಯಾವಂತರು ಕಷ್ಟಪಟ್ಟು ಸಂಪಾದಿಸುವುದಕ್ಕಿಂತ ಕಡಿಮೆ ಅವಧಿಯಲ್ಲಿ ರಾಜಕಾರಣಿಗಳು ಹೆಚ್ಚು ಸಂಪಾದಿಸುವಾಗ ನಮ್ಮ ವಿದ್ಯೆಗೆ ಬೆಲೆ ಏನಿದೆ?*

ಉಗಿ, ಉಗಿ ಎನ್ನಿಸಿಕೊಳ್ಳುವ ರಾಜಕಾರಣಿಯ ಸಂಪಾದನೆಗಿಂತ ಉಘೇ, ಉಘೇ ಎನ್ನಿಸಿಕೊಳ್ಳುವಂತಹ ವಿದ್ಯೆ ಎಂದಿಗೂ ಅಮೂಲ್ಯ ರೆಡ್ಡಿಗಾರು!

ವಿ. ಹಮೀದ್, ವಿಟ್ಲ

*ನಿಮಗೆ ಲವ್ ಮ್ಯಾರೇಜ್ ಇಷ್ಟವೋ, ಅರೇಂಜ್ಡ್ ಮ್ಯಾರೇಜ್ ಇಷ್ಟವೋ?*

ರಾಖಿ ಸಾವಂತಳಂತೆ ರಿಯಾಲಿಟಿ ಮ್ಯಾರೇಜ್ ಆಗುವುದೇ ಚೆಂದ. ಕೆಲವೇ ದಿನಗಳಲ್ಲಿ ಬಿಟ್ಟುಬಿಡಬಹುದು!

ಆರಿಫ್, ದಾವಣಗೆರೆ

*ಸ್ನೇಹವನ್ನೇ ಉಳಿಸಿಕೊಳ್ಳಲಾಗದ ಹುಡುಗಿಯರು ಪ್ರೀತಿಯನ್ನು ಉಳಿಸಿಕೊಳ್ಳಬಲ್ಲರೆ?*

ಪತಿ ವಿಶಾಲಹೃದಯಿ ಆಗಿದ್ದು, ಪ್ರೀತಿ ನಿಷ್ಕಾಮದ್ದಾದರೆ ಸಾಧ್ಯ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಹೃದಯಕ್ಕೆ ಗೊತ್ತಿರುವ ಕಾರಣಗಳು ವಿವೇಕಕ್ಕೆ ಗೊತ್ತಿರುವುದಿಲ್ಲವೆ?*

ಗೊತ್ತಿರುತ್ತದೆ. ಆದರೆ ತುಡಿತಕ್ಕಿಂತಲೂ, ಮಿಡಿತಕ್ಕಿಂತಲೂ, ಹಿಡಿತ ಮುಖ್ಯ ಎಂದು ವಿವೇಕಕ್ಕೆ ಗೊತ್ತು!

ಜಾಕೋಬ್ ಡಿಸೋಜ, ಕುರುವಳ್ಳಿ

*ಆಸೆ ಎನ್ನುವುದು ದುರಾಲೋಚನೆಯೋ, ದೂರಾಲೋಚನೆಯೋ?*

ಅಬ್ನಾರ್ಮಲ್ ಆದರೆ ದುರಾಲೋಚನೆ, ಸೆನ್ಸಿಬಲ್ ಆದರೆ ದೂರಾಲೋಚನೆ!

ಪಿ.ಜೆ. ರಾಘವೇಂದ್ರ, ಮೈಸೂರು

*ಚುನಾವಣೆಯಲ್ಲಿ ಸೋತವರು ವನವಾಸಕ್ಕೆ ತೆರಳುವಂತಿದ್ದರೆ..... ಹೇಗಿರುತ್ತಿತ್ತು?*

ಹೆಚ್ಚು ಹೆಚ್ಚು ವೀರಪ್ಪನ್‌ಗಳ ಜನನವಾಗುತ್ತಿತ್ತು.

ವಿ. ಹೇಮಂತಕುಮಾರ್, ಬೆಂಗಳೂರು

*ಈಗಿನ ಜಾಹೀರಾತು ಮತ್ತು ಬ್ರೇಕಿಂಗ್ ನ್ಯೂಸ್‌ಗಳು ಯಾವ ಬ್ಲೂಫಿಲಂಗೂ ಕಮ್ಮಿ ಇಲ್ಲವಲ್ಲಾ...?*

ಜನ ಎಲ್ಲವೂ ಮುಕ್ತವಾಗಿರಬೇಕು, ಎಲ್ಲದರಲ್ಲೂ ಪಾರದರ್ಶಕತೆ ಇರಬೇಕು ಎಂದು ಕೇಳಿದುದರ ಪ್ರಭಾವವಂತೆ!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

*ರಾವಣನ ಹತ್ತು ತಲೆಗಳಲ್ಲಿ ಸೀತಾಪಹರಣ ಮಾಡಬೇಕೆಂಬ ಕ್ರಿಮಿನಲ್ ಐಡಿಯಾ ಬಂದದ್ದು ಯಾವ ತಲೆಗೆ?*

ಅದು ರಾವಣನ ಐಡಿಯಾ ಅಲ್ಲ. ಶೂರ್ಪನಖಿಯ ತಲೆಗೆ ಹೊಳೆದು, ರಾವಣನ ಕಿವಿಗೆ ಬಡಿದು, ನಂತರ ಅವನ ಕುತ್ತಿಗೆಗೆ ಬಂದದ್ದು!

ಶಿವಮೊಗ್ಗ ರಮೇಶ್, ಮೈಸೂರು

*ಎಷ್ಟೋ ಜನಕ್ಕೆ ಒಪ್ಪತ್ತಿನ ಊಟವೂ ಇಲ್ಲದಿರುವಾಗ ನಾನು ಒಂದು ಹೊತ್ತಿನ ಊಟ ಬಿಟ್ಟರೂ ಹೆಂಡತಿ ಕಣ್ಣೀರು ಹಾಕುತ್ತಾಳಲ್ಲ?*

ಅತ್ತಿದ್ದು ಊಟ ಬಿಟ್ಟಿದ್ದಕ್ಕಲ್ಲ, ಮರುದಿನ ಅದರ ಮೂರರಷ್ಟು ಕಬಳಿಸುತ್ತೀರಲ್ಲಾ ಎಂಬ ದುಃಖಕ್ಕೆ!

ಪಟ್ಟಾಂಗದ ಪಟ್ಟಾಭಿ, ಬೆಂಗಳೂರು

*ರೀ ಇವರೇ, ಹೆಂಡತಿಯಾದವಳು ಸಿಟ್ಟಿನಲ್ಲಿ ಗಂಡನನ್ನು ಹೊಡೆದರೆ ಗಂಡ ಸುಮ್ಮನಿರಬೇಕೋ ಅಥವಾ ತಿರುಗಿ ಬಾರಿಸಬೇಕೋ?*




ಜೋರಾಗಿ ಕಿರುಚಲೂಬೇಡಿ. ಇಲ್ಲದಿದ್ದರೆ ಬ್ರೇಕಿಂಗ್ ನ್ಯೂಸ್ ಮೂಲಕ ಸಂಸಾರದ ಗುಟ್ಟು ಬೀದಿಬೀದಿಗೆ ಹರಡುತ್ತದೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಕುದುರೆಯ ಬಾಲಕ್ಕೇ ಏಕೆ ಹಣ ಕಟ್ಟುತ್ತಾರೆ?*

ಬಾಲ, ಕುದುರೆ, ಹಣ ಮೂರೂ ಚಂಚಲವಾದ್ದರಿಂದ ಹೊಂದಾಣಿಕೆ ಆಗಬಹುದೆಂದು!

ಪಿ. ನಿವೇದಿತಾ, ಬಳ್ಳಾರಿ

*ಓದು ಒಕ್ಕಾಲು, ಬುದ್ಧಿ ಮುಕ್ಕಾಲು ಅಂತಾರಲ್ಲಾ, ಹಾಗಾದರೆ ದುಡ್ಡು...?*

ಆದಾಯ ಒಕ್ಕಾಲು, ಟ್ಯಾಕ್ಸು ಮುಕ್ಕಾಲು!

ಅರಕೆರೆ ಸುರೇಶ್, ಭದ್ರಾವತಿ

*ಕಾಲೇಜು ಹುಡುಗಿಯರ ಕೆಲವು ಉಡುಪುಗಳು ಮೈಗೆ ಅಂಟಿಕೊಂಡಿರುತ್ತವೆಯಲ್ಲ, ಏಕೆ?*

ಕೆಲವಾದರೂ ಅಂಟಿಕೊಂಡಿರಲಿ ಬಿಡಿ ಸಾರ್.

■ ರಾಮ್